ವಿ. ಮಧುಗಿರಿಯಲ್ಲಿ ಎಂಕೆಎಸ್‌ಎಸ್ ಟ್ರಾನ್ಸ್‌ಫಾರ್ಮರ್ ಸುಟ್ಟುಹೋಗಿರುವ ಹಾಗೂ ತುಮಕೂರು ಜಿಲ್ಲೆಯಲ್ಲಿ ಓಲ್ಟೇಜ್ ಕಡಿಮೆಯಾಗಿರುವುದರ ಪ್ರಯುಕ್ತ ನೀರಾವರಿ ಪಂಪುಸೆಟ್ಟುಗಳು ಕಾರ್ಯನಿರ್ವಹಿಸದೇ ಬೆಳೆದು ನಿಂತಿರುವ ಬೆಳೆಗಳಿಗೆ ಅಪಾರ ಹಾನಿಯಾಗಿರುವ ಬಗ್ಗೆ.

ಶ್ರೀ ಆರ್. ನಾರಾಯಣ (ಬೆಳ್ಳಾವಿ).—ಮಾನ್ಯ ಅಧ್ಯಕ್ಷರೆ, ಮಧುಗಿರಿಯಲ್ಲಿ ಎಂಕೆಎಸ್‌ಎಸ್ ಟ್ರಾನ್ಸ್‌ಫಾರ್ಮರ್ ಸಟ್ಟುಹೋಗಿರುವ ಹಾಗೂ ತುಮಕೂರು ಜಿಲ್ಲೆಯಲ್ಲಿ ಓಲ್ಟೇಜ್ ಕಡಿಮೆಯಾಗಿರುವುದರ ಪ್ರಯುಕ್ತ ನೀರಾವರಿ ಪಂಪುಸೆಟ್ಟುಗಳು ಕಾರ್ಯನಿರ್ವಹಿಸದೇ ಬೆಳೆದು ನಿಂತಿರುವ ಬೆಳೆಗಳಿಗೆ ಅಪಾರ ಹಾನಿಯಾಗಿರುವ ಬಗ್ಗೆ ಮಾನ್ಯ ನೀರಾವರಿ, ಲೋಕೋಪಯೋಗಿ ಹಾಗೂ ಇಂಧನ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ (ಮಾನ್ಯ ನೀರಾವರಿ, ಲೋಕೋಪಯೋಗಿ ಹಾಗೂ ಇಂಧನ ಖಾತೆಯ ಸಚಿವರು).—ಮಾನ್ಯ ಅಧ್ಯಕ್ಷರೆ, ತಮ್ಮ ಅಪ್ಪಣೆ ಪಡೆದು ಈ ಹೇಳಿಕೆಯನ್ನು ಮಾಡುತ್ತೇನೆ.

ಮಧುಗಿರಿ ಸಬ್-ಸ್ಟೇಷನ್ನಿನಲ್ಲಿ ೨೫೮ ಎಂ.ವಿ.ಎ. ಸಾಮರ್ಥ್ಯದ ೬೬ ಕೆ.ವಿ. ವಿದ್ಯುತ್ ಪರಿವರ್ತಕಗಳಿದ್ದುವು. ಅವುಗಳ ಪೈಕಿ ಒಂದು ೮ ಎಂ.ವಿ.ಎ ಪರಿವರ್ತಕ ದಿನಾಂಕ ೪ನೇ ಫೆಬ್ರುವರಿ ೧೯೯೦ರಂದು ಟ್ಯಾಪ್ ಚೇಂಜಿಂಗ್ ಗೇರ್ ವ್ಯವಸ್ಥೆಯು ಹಾಳಾಗಿದ್ದುದರಿಂದ ಕೆಟ್ಟುಹೋಯಿತು. ಈ ಕೆಟ್ಟುಹೋದ ಪರಿವರ್ತಕವನ್ನು ೬೬ ಎಂ.ವಿ.ಎ. ಸಾಮರ್ಥ್ಯದ ಟ್ರಾನ್ಸ್‌ಫಾರ್ಮರ್ ಒಂದನ್ನು ಬೆಂಗಳೂರಿನಿಂದ ತರಿಸಿ ೧೫ನೇ ಮಾರ್ಚ್ ೧೯೯೦ರಂದು ಮಧುಗಿರಿ ಸಬ್‌ಸ್ಟೇಷನ್ನಿನಲ್ಲಿ ಹಾಕಿ ಬದಲಾಯಿಸಲಾಯಿತು. ಈ ೬೬ ಎಂ. ವಿ. ಎ. ಸಾಮರ್ಥ್ಯದ ಪರಿವರ್ತಕದಲ್ಲಿ ೧೮ನೇ ಮಾರ್ಚ್ ೧೯೯೦ರಂದು ಸ್ವಲ್ಪ ದೋಷವುಂಟಾಗಿ ಆ ದೋಷವನ್ನು ೨೦ನೇ ಮಾರ್ಚ್ ೧೯೯೦ರಂದು ಸರಿಪಡಿಸಲಾಯಿತು. ೪ನೇ ಫೆಬ್ರುವರಿ ೧೯೯೦ರಿಂದ ೨೦ನೇ ಮಾರ್ಚ್ ೧೯೯೦ರ ವರೆಗಿನ ಅವಧಿಯಲ್ಲಿ ಹೊರೆಯನ್ನು ಒಂದು ೮ಎಂ.ವಿ.ಎ ಸಾಮರ್ಥ್ಯದ ಪರಿವರ್ತಕಕ್ಕೆ ಸೀಮಿತಗೊಳಿಸಲು ಮಧುಗಿರಿ ಸಬ್-ಸ್ಟೇಷನ್ನಿನಿಂದ ಸರಬರಾಜಾಗುವ ಎಲ್ಲಾ ಪ್ರದೇಶಗಳಿಗೆ ಅನಿಯಮಿತ ಲೋಡ್ ಷೆಡ್ಡಿಂಗನ್ನು ಮಾಡಲಾಯಿತು. ಆದರೆ ೨೦ನೇ ಮಾರ್ಚ್ ೧೯೯೦ರಿಂದ ಮಧುಗಿರಿಯಲ್ಲಿನ ಪರಿವರ್ತಕಗಳು ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿವೆ.

ತುಮಕೂರು ಜಿಲ್ಲೆಯಲ್ಲಿನ ಲೋಡ್‌ಗಳು ಬಹುಪಾಲು ನೀರಾವರಿ ಪಂಪುಸೆಟ್ಟುಗಳಿಂದಾಗಿರುತ್ತದೆ. ಬೇಸಿಗೆಯ ಕಾಲದಲ್ಲಿ ನೀರಾವರಿ ಪಂಪುಸೆಟ್ಟುಗಳ ಬೇಡಿಕೆ ಅಧಿಕವಾಗಿ ವಿದ್ಯುದ್ಬಲದಲ್ಲಿ (ಓಲ್ಟೇಜ್) ಕುಸಿತವುಂಟಾಗುತ್ತದೆ. ಈ ವಿದ್ಯುದ್ಬಲದಲ್ಲಿನ ಕುಸಿತವನ್ನು ತಪ್ಪಿಸಲು ತುಮಕೂರು ಜಿಲ್ಲೆಯಲ್ಲಿ ಮಂಡಲಿಯು ಕೆಳಕಂಡ ಕ್ರಮಗಳನ್ನು ತೆಗೆದುಕೊಂಡಿದೆ.

೧) ದಾವಣಗೆರೆಯಿಂದ ಗೌರಿಬಿದನೂರಿಗೆ ನೇರ ೨೨೦ ಕೆ.ವಿ. ಲೈನನ್ನು ಮಾರ್ಚ್ ೧೯೯೦ರಲ್ಲಿ ಕಾರ್ಯಪ್ರವೃತ್ತಿಗೊಳಿಸಲಾಯಿತು.

೨) ಗೌರಿಬಿದನೂರಿನಿಂದ ಕೊಡಗೇನಹಳ್ಳಿಗೆ ಒಂದು ೬೬ ಕೆ. ವಿ. ಲೈನು ಮತ್ತು ಕೊಡಗೇನಹಳ್ಳಿಯಲ್ಲಿ ೬೬ ಕೆ. ವಿ. ಸಬ್-ಸ್ಟೇಷನ್ ಸ್ಥಾಪಿಸುವ ಕೆಲಸಗಳು ಪ್ರಾರಂಭವಾಗಿದ್ದು ಇವುಗಳು ಮುಂಗಿಯುವ ಹಂತದಲ್ಲಿದ್ದು ಶೀಘ್ರದಲ್ಲಿಯೇ ಕಾರ್ಯಾರಂಭ ಮಾಡುವ ಸೂಚನೆಯಿದೆ.

೩) ಒಂದು ಹೊಸ ೨೫೦ ಕೆ. ವಿ. ಸಬ್-ಸ್ಟೇಷನನ್ನು ತುಮಕೂರಿನಲ್ಲೂ, ಒಂದು ಹೊಸ ಲಿಂಕ್ ಲೈನನ್ನು ಕೊರಟಗೆರೆಗೂ ಒಂದು ೬೬ ಕೆ.ವಿ. ಹೊಸ ಸಬ್-ಸ್ಟೇಷನನ್ನು ಕಳ್ಳಂಬೆಳ್ಳದಲ್ಲೂ ಕೊರಟಗೆರೆಯಲ್ಲಿ ಒಂದು ಕೆಪಾಸಿಟರ್ ಬ್ಯಾಂಕನ್ನು ಅಳವಡಿಸುವುದು ಮತ್ತು ಚಿಕ್ಕನಾಯಕನಹಳ್ಳಿ ಎಂ.ಯು.ಎಸ್.ಎಸ್ ನಲ್ಲಿ ಇರುವ ವಿದ್ಯುತ್ ಪರಿವರ್ತಕ ಸಾಮರ್ಥವನ್ನು ಹೆಚ್ಚಿಸುವುದು ಈ ಎಲ್ಲಾ ಕೆಲಸಗಳನ್ನೂ ಸಧ್ಯದಲ್ಲಿಯೇ ಪ್ರಾರಂಭಿಸಲಾಗುವುದು.

ಈ ಮೇಲ್ಕಂಡ ಕೆಲಸಗಳಿಂದ ತುಮಕೂರು ಜಿಲ್ಲೆಯಲ್ಲಿ ವಿದ್ಯುತ್ತಿನ ಅಡಚಣೆಗಳು ಕಡಿಮೆಯಾಗಿ ವಿದ್ಯುತ್ತಿನ ಗುಣಮಟ್ಟ ಸುಧಾರಿಸುವುದು

ಶ್ರೀ ಆರ್. ನಾರಾಯಣ್.—ಮಾನ್ಯ ಅಧ್ಯಕ್ಷರೆ, ಕೋಲಾರ ಮತ್ತು ತುಮಕೂರು ಜಿಲ್ಲೆಗೆ ಸೇರಿದಂತೆ ಎಂ.ಇ.ಎಸ್, ಸ್ಟೇಷನ್ ಇದೆ. ಈಗ ಇರತಕ್ಕ ಎಂ.ಇ.ಎಸ್ ಸ್ಟೇಷನ್‌ನಿಂದ ವಿದ್ಯುತ್ ಸರಿಯಾಗಿ ಸರಬರಾಜು ಆಗುತ್ತಿಲ್ಲ ತುಮಕೂರು ಜಿಲ್ಲೆಯಲ್ಲಿ ಅಂತಸ್ಥನಹಳ್ಳಿ, ಮಧುಗಿರಿ

ತಾಲ್ಲೂಕು ಬಡವನಹಳ್ಳಿ, ಚಿಕ್ಕನಾಯಕನಹಳ್ಳಿ ತಾಲ್ಲೂಕು ಹುಳಿಯಾರು, ಸಿರಾ ತಾಲ್ಲೂಕು ಕಳ್ಳಂಬೆಳ್ಳ, ಕಾಣಿಗಲ್ ತಾಲ್ಲೂಕಿನ ಅಂಚೆಪಾಳ್ಯ ಈ ಜಾಗಗಳಲ್ಲಿ ಎಂ.ಇ.ಎಸ್.ಎಸ್ ಸ್ಟೇಷನ್ ಮಂಜೂರು ಆಗಿದ್ದರೂ ಇದುವರೆಗೂ ಕಾರ್ಯವನ್ನು ಮಾಡಿಲ್ಲ. ಆದಷ್ಟು ಬೇಗ ಈ ಎಂಇಎಸ್ಎಸ್ ಸ್ಟೇಷನ್‌ಗಳು ಕಾರ್ಯಾರಂಭ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಜೊತೆಗೆ ಬೆಳ್ಳಾವಿ ವಿಧಾನಸಭಾ ಕ್ಷೇತ್ರ ನಾಲ್ಕು ತಾಲ್ಲೂಕುಗಳಿಂದ ಕೂಡಿದ ಗ್ರಾಮಾಂತರ ಪ್ರದೇಶ. ಚೇಳೂರು ಹೋಬಳಿಗೆ ಎಂ.ಇ.ಎಸ್.ಎಸ್ ಸ್ಟೇಷನ್ ಮಂಜೂರು ಮಾಡಬೇಕೆಂದು ಮುಖ್ಯಮಂತ್ರಿಗಳು ಸಂಬಂಧಪಟ್ಟ ಕೆ.ಇ.ಬಿ. ಚೀಫ್ ಇಂಜಿನಿಯರ್ ಈಗಾಗಲೇ ಪತ್ರ ಬರೆದಿದ್ದಾರೆ. ಆದ್ದರಿಂದ ೯೧–೯೨ರಲ್ಲಿ ಚೇಳೂರಿಗೆ ಎಂಇಎಸ್ಎಸ್ ಸ್ಟೇಷನ್ ಮಂಜೂರಾತಿ ಕೊಡಬೇಕಾದ್ದು ಬಹಳ ಅಗತ್ಯ ಇದೆ. ಇವತ್ತು ವಿದ್ಯುತ್ ತೊಂದರೆ ಹೀಗೆ ಮುಂದುವರಿದರೆ ಗ್ರಾಮೀಣ ಪ್ರದೇಶಗಳಲ್ಲಿ ಶಾಸಕರು ಓಡಾಡುವುದು ಕಷ್ಟವಾಗುತ್ತದೆ. ಮಾನ್ಯ ಮಂತ್ರಿಯವರು ಈ ಕಡೆ ತೀವ್ರವಾದ ಗಮನ ಹರಿಸಿ ಸಮರೋಪಾದಿಯಲ್ಲಿ ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರ ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು, ಮಂಡಲಿಯ ಆರ್ಥಿಕ ಪರಿಸ್ಥಿತಿಗೆ ಅನುಗುಣವಾಗಿ ಹಂತ ಹಂತವಾಗಿ ಈ ಕಾರ್ಯಗಳನ್ನು ತೆಗೆದುಕೊಳ್ಳುತ್ತೇವೆ ಎನ್ನತಕ್ಕಂಥ ಆಶ್ವಾಸನೆಯನ್ನು ತಮ್ಮ ಮೂಲಕ ಅವರಿಗೆ ಕೊಡ ಬಯಸುತ್ತೇನೆ.

ಡಾ. ಜಿ. ಪರಮೇಶ್ವರ್.—ಸ್ವಾಮಿ, ಸನ್ಮಾನ್ಯ ಮಂತ್ರಿಗಳ ಉತ್ತರ ಸಮಂಜಸವಾಗಿದೆ. ಇದು ಬಹಳ ಗಹನವಾದ ವಿಚಾರ. ಮಧುಗಿರಿ ತಾಲ್ಲೂಕಿನಲ್ಲಿ ಏನು ಟ್ರಾನ್ಸ್‌ಫಾರ್ಮರ್ ಸುಟ್ಟು ಹೋಗಿತ್ತು ಅದಕ್ಕೆ ಮುಂಜಿ ಬಹಳಷ್ಟು ಪವರ್ ಷಾರ್ಟೇಜ್ ಬಂದು ಫ್ಲಕ್ಚುಯೇಷನ್ಸ್ ಆಗಿ ೧೬೦ ಐ.ಪಿ. ಸೆಟ್ಟುಗಳು ಸುಟ್ಟು ಹೋಗಿದೆ. ಸಾವಿರಾರು ಎಕರೆ ಜಮೀನಿನಲ್ಲಿದ್ದಂಥ ಬೆಳೆ ನಷ್ಟವಾಗಿ ಲಕ್ಷಾಂತರ ರೂಪಾಯಿ ಲಾಸಾಗಿದೆ. ಇದಕ್ಕೆ ಪರಿಹಾರವನ್ನು ಬೋರ್ಡ್‌ನವರು ಕೊಡುವುದಕ್ಕಾಗುತ್ತದೆಯೇ ? ಇದಕ್ಕೆ ಏನು ಕಾರಣ ಎನ್ನುವುದನ್ನು ಮಂಡಲಿಯವರಾದರೂ ಕಂಡುಹಿಡಿದಿದ್ದಾರೆಯೆ ? ರೈತ ವರ್ಗದವರು ಹೇಳುವ ಪ್ರಕಾರ, ಇದಕ್ಕೆಲ್ಲಾ ಬ್ಯಾಡ್ ಮ್ಯಾನೇಜ್‌ಮೆಂಟ್ ಎಂದು ಅಲ್ಲಿರತಕ್ಕ ಅಧಿಕಾರಿ ವರ್ಗದವರ ಮೇಲೆ ದೂಷಣೆ ಮಾಡಿದ್ದಾರೆ. ಇದರ ಬಗ್ಗೆ ಏನಾದರೂ ಕ್ರಮ ತೆಗೆದುಕೊಂಡಿದ್ದಾರೆಯೇ ಅಥವಾ ಅದು ನಿಜವೇ ಎನ್ನತಕ್ಕಂಥ ವಿಚಾರವನ್ನು ಮಾನ್ಯ ಮಂತ್ರಿಗಳು ಹೇಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿ ಗೌಡ.—ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಸದಸ್ಯರು ವಿದ್ಯುತ್ ನಷ್ಟದಿಂದ ಬಹಳಷ್ಟು ಪಂಪುಸೆಟ್ಟುಗಳು ಹಾಳಾಗಿವೆ ಬೆಳೆ ನಷ್ಟವಾಗಿದ್ದಕ್ಕೆ ಬೋರ್ಡ್‌ನವರು ಪರಿಹಾರ ಕೊಡುವುದಕ್ಕೆ ಸಾಧ್ಯವೇ ಎಂದು ಕೇಳಿದ್ದಾರೆ ಬಹುಶಃ ಇಂದಿನ ಬೋರ್ಡಿನ ಆರ್ಥಿಕ ಪರಿಸ್ಥಿತಿಯಲ್ಲಿ ಮತ್ತು ನಮ್ಮಲ್ಲಿರತಕ್ಕಂಥ ವ್ಯವಹಾರಿಕ ಪದ್ಧತಿಯಲ್ಲಿ ಅದು ಸಾಧ್ಯವಿಲ್ಲ ಎನ್ನುವ ಮಾತನ್ನು ಹೇಳುತ್ತೇನೆ. ಈ ರೀತಿ ದೋಷ ಉಂಟಾಗುವುದಕ್ಕೆ ಬ್ಯಾಡ್ ಮ್ಯಾನೇಜ್‌ಮೆಂಟ್ ಕಾರಣ ಇರಬಹುದೆನ್ನುವ ಮಾತನ್ನು ಹೇಳಿದ್ದಾರೆ. ಆ ವಿಚಾರವನ್ನು ನಾನು ಪರಿಶೀಲನೆ ಮಾಡುತ್ತೇನೆ, ಮತ್ತೆ ಅದನ್ನು ಸರಿಪಡಿಸುವುದಕ್ಕೂ ಕೂಡ ಪ್ರಯತ್ನ ಮಾಡುತ್ತೇನೆ.

೧೨–೩೦ ಪಿ.ಎಂ.

ಶ್ರೀ ಎಸ್. ಷಫಿಅಹಮದ್.—ಮಾನ್ಯ ಅಧ್ಯಕ್ಷರೆ, ತುಮಕೂರು ತಾಲ್ಲೂಕಿನಲ್ಲಿ ಸುಮಾರು ೬ ತಿಂಗಳಿಂದ ೩೬೦ ಐ. ಪಿ. ಸೆಟ್ಟುಗಳು ಪೆಂಡಿಂಗ್ ಇವೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರದಲ್ಲಿ ತಿಳಿಸಿಲ್ಲ. ತುಮಕೂರು ಜಿಲ್ಲೆಯಲ್ಲಿ ಬೆಳಿಗ್ಗೆ ೭ ಗಂಟೆಗೆ ವಿದ್ಯುತ್ ಹೋದರೆ, ರಾತ್ರಿ ೯–೩೦ರವರೆಗೂ ವಿದ್ಯುತ್ ಇರುವುದಿಲ್ಲ. ತುಮಕೂರು ಟೌನ್ ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಏರಿಯಾ ಆಗಿದ್ದು ವಿದ್ಯುತ್ ಸಮಸ್ಯೆ ಬಹಳ ಇದೆ. ಕಳೆದ ಎರಡು ವರ್ಷಗಳಿಂದ ಪೆಂಡಿಂಗ್ ಇರತಕ್ಕ ಎಂ.ಇ.ಎಸ್. ಸ್ಟೇಷನ್ ಕೆಲಸವನ್ನು ಆತಿ ಶೀಘ್ರದಲ್ಲಿ ಮಾಡಿಕೊಟ್ಟರೆ ತುಮಕೂರು ಜಿಲ್ಲೆಯಲ್ಲಿ ಈ ವಿದ್ಯುತ್ ಸಮಸ್ಯೆ ಬಗೆಹರಿಯುತ್ತದೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಹೇಳಬೇಕೆಂದು ಕೇಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿ ಗೌಡ.—೩೫೫ ಪಂಪ್‌ಸೆಟ್ಟುಗಳು ಇನ್ನು ಖಾಲಿ ಇವೆ; ವಿದ್ಯುತ್ ಪೂರೈಕೆಯಾಗಿಲ್ಲವೆಂಬ ಮಾತನ್ನು ಅವರು ಹೇಳಿದ್ದಾರೆ. ಟ್ರಾನ್ಸ್‌ಫಾರ್ಮರ್ ಸುಟ್ಟು ಹೋಗಿ, ಅದರಿಂದ ಆಗಿರತಕ್ಕ ನಷ್ಟದ ಬಗ್ಗೆ ಗಮನ ಸೆಳೆದಿದ್ದಾರೆ. ಆದ್ದರಿಂದ ಆ ಮಾತನ್ನು ನಾನು ಮೊದಲು ಹೇಳಲಿಲ್ಲ. ಆದರೂ ಕೂಡ ತುಮಕೂರು ಜಿಲ್ಲೆಯಲ್ಲಿ ಇರತಕ್ಕಂಥ ೩೦೫ ಪಂಪುಸೆಟ್ಟುಗಳಿಗೆ ವಿದ್ಯುತ್

ಪೂರ್ಯೆಕೆ ಮಾಡಲು ನಾವು ಶೀಘ್ರದಲ್ಲಿ ಕ್ರಮ ತೆಗೆದುಕೊಳ್ಳುತ್ತೇವೆ. ಎಂ.ಯು.ಎಸ್.ಎಸ್. ಒಂದನ್ನು ನಿರ್ಮಾಣ ಮಾಡಲು ಈ ವರ್ಷ ಆ ಕಾರ್ಯವನ್ನು ಆರಂಭ ಮಾಡುತ್ತೇವೆಂದು ನಾನು ಉತ್ತರದಲ್ಲಿ ಮೊದಲೇ ಹೇಳಿದ್ದೇನೆ.

ಶ್ರೀ ಟಿ.ಬಿ. ಜಯಚಂದ್ರ.—ಈಗಾಗಲೇ ಮಾನ್ಯ ಸಚಿವರು ಉತ್ತರದಲ್ಲಿ ೬೬ ಕಿಲೋವ್ಯಾಟ್ಸ್‌ನ ಸಬ್‌ಸ್ಟೇಷನ್ ಅನ್ನು ಕಳ್ಳಂಬೆಳ್ಳದಲ್ಲಿ ಪ್ರಾರಂಭ ಮಾಡುತ್ತೇವೆಂದು ಹೇಳಿದ್ದಾರೆ. ಇದು ಸುಮಾರು ೧೯೯೧ನೇ ಇಸವಿಯಲ್ಲೇ ಮುಗಿಸುವಂತಹ ಕಾರ್ಯಕ್ರಮವಾಗಿತ್ತು. ಇನ್ನೂ ಸಧ್ಯದಲ್ಲೇ ಮುಗಿಸುತ್ತೇವೆಂದು ಹೇಳುತ್ತೀರಿ. ನನಗೆ ಈ ರೀತಿಯ ಉತ್ತರದಿಂದ ಖಂಡಿತ ಸಮಾಧಾನವಾಗುವುದಿಲ್ಲ. ಇವತ್ತು ವೋಲ್ಟೇಜ್‌ಗೋಸ್ಕರ ದೀಪ ಹಚ್ಚಿ ಕಾದು ಕುಳಿತಿಂತಕ್ಕ ಸಂದರ್ಭ ನೋಡುತ್ತಿದ್ದೇವೆ. ನಮ್ಮಲ್ಲಿರತಕ್ಕ ಅಡಿಕೆ, ತೆಂಗಿನ ಫಸಲೆಲ್ಲ ಹಾಳಾಗಿ ಹೋಗಿದೆ, ಗದ್ದೆಗಂತೂ ನೀರನ್ನು ಬಿಡುವ ಪರಿಸ್ಥಿತಿಯಲ್ಲಿಲ್ಲ. ಕಳ್ಳಂಬೆಳ್ಳದಲ್ಲಿ ಸಬ್‌ಸ್ಟೇಷನ್ ಅನ್ನು ಶೀಘ್ರವಾಗಿ ಪ್ರಾರಂಭಿಸುವ ಬಗ್ಗೆ ನಾನು ಮುಖ್ಯ ಇಂಜಿನಿಯರ್‌ರವರ ಹತ್ತಿರ ಮಾತನಾಡಿದಾಗ ಅವರು ಸರ್ಕಾರದ ಗಮನಕ್ಕೆ ತನ್ನಿ ನಮ್ಮ ಹತ್ತಿರ ಮೆಟೀರಿಯಲ್ಸ್ ಇಲ್ಲ, ನಾವು ತರುವುದಕ್ಕಾಗುವುದಿಲ್ಲ, ಮಾಡುವುದಕ್ಕಾಗುವುದಿಲ್ಲವೆಂದು ಹೇಳಿದರು. ಆದ್ದರಿಂದ ನಿರ್ದಿಷ್ಟವಾಗಿ ಯಾವಾಗ ಪ್ರಾರಂಭ ಮಾಡುತ್ತೀರಿ ಎಂದು ನಾನು ಕೇಳುತ್ತಿದ್ದೇನೆ. ಹೊಸದುರ್ಗದ ಗಡಿಯಲ್ಲಿರುವ ಹುಳಿಯಾರ್‌ನಲ್ಲಿ ಸಬ್‌ಸ್ಟೇಷನ್ ಮಾಡುವುದನ್ನು ೧೯೯೧ನೇ ಸಾಲಿನಲ್ಲಿ ಮುಗಿಸಬೇಕಾಗಿತ್ತು. ತಾವು ಇದರ ಬಗ್ಗೆ ಉತ್ತರದಲ್ಲಿ ಪ್ರಸ್ತಾಪ ಮಾಡಿಲ್ಲ. ಹುಳಿಯಾರ್ ಲಿಮಿಟ್‌ನಲ್ಲಿರುವ ಹಳ್ಳಿಗಳ ಪರಿಸ್ಥಿತಿ ಶೋಚನೀಯ ಸ್ಥಿತಿಯಲ್ಲಿದೆ. ಹಳ್ಳಿಗಳಲ್ಲಿ ಇವತ್ತು ಜನರು ಲೈಟ್ ಹಾಕಿಕೊಂಡು ಲಾಟೀನು ಹಿಡಿದುಕೊಂಡು ಕುಳಿತುಕೊಂಡಿರತಕ್ಕ ಪರಿಸ್ಥಿತಿಯನ್ನು ನೋಡುತ್ತಿದ್ದೇವೆ ಕಳ್ಳಂಬೆಳ್ಳ ಮತ್ತು ಹುಳಿಯಾರ್ ಸಬ್‌ಸ್ಟೇಷನ್ ಶೀಘ್ರವಾಗಿ ಇಂತಹ ದಿವಸದಲ್ಲಿ ಪ್ರಾರಂಭ ಮಾಡಿ ಮುಗಿಸಿಕೊಡುತ್ತೇನೆ ಎನ್ನತಕ್ಕಂಥ ಆಶ್ವಾಸನೆ ಕೊಟ್ಟರೆ ಖಂಡಿತವಾಗಿ ರೈತರಿಗೆ ಹಚ್ಚಿನ ಸಹಾಯ ಮಾಡಿಕೊಟ್ಟಂತಾಗುತ್ತದೆ. ಆದ್ದರಿಂದ ಇದರ ಬಗ್ಗೆ ನಿರ್ದಿಷ್ಟವಾಗಿ ಉತ್ತರವನ್ನು ಕೊಡಬೇಕ್ಕು ಮತ್ತು ಆದೇ ರೀತಿ ಕಾರ್ಯಕ್ರಮವನ್ನು ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ಕೇಳಲಿಚ್ಚಿಸುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಮಾನ್ಯ ಅಧ್ಯಕ್ಷರೆ, ಆಶ್ವಾಸನೆ ಕೊಡುವುದರಿಂದಲೇ ನಿಮ್ಮ ಕೆಲಸ ಆಗಂತ್ತದೆ ಎನ್ನುವ ವಿಶ್ವಾಸ ನನಗೆ ಇಲ್ಲ, ಬೋರ್ಡಿನ ಹೆಣಕಾಸಿನ ಪರಿಸ್ಥಿತಿ ಯಾವ ರೀತಿ ಇದೆ ಎಂದರೆ ಅಲ್ಲಿ ಫ್ಯೂಜ್ ಕೊಡಲಿಕ್ಕೆ ಹಣವಿಲ್ಲ. ಅಂತಹ ಕೆಟ್ಟ ಪರಿಸ್ಥಿತಿಯಲ್ಲಿ ವಿದ್ಯುತ್ ಮಂಡಲಿ ಇದೆ ಎಂದು ತಮ್ಮ ಗಮನಕ್ಕೆ ತರುತ್ತೇನೆ. ಇಂತಹ ಕಷ್ಟ ಪರಿಸ್ಥಿತಿಯಲ್ಲಿಯೂ ಕೂಡ ತಾವು ಹೇಳಿದ ಸಲಹೆಗಳನ್ನು ಗಮನದಲ್ಲಿಟ್ಟು ಆದಷ್ಟು ಬೇಗ ಆದ್ಯತೆಯ ಮೇಲೆ ನಮ್ಮ ಹಣಕಾಸಿನ ಪರಿಸ್ಥಿತಿಯನ್ನು ಅನುಸರಿಸಿ ಕೆಲಸ ಮಾಡುತ್ತೇವೆಂದು ಹೇಳಬಹುದೇ ವಿನಃ ಇಂತಹ ದಿವಸವೇ ಇವತ್ತೇ ಪ್ರಾರಂಭ ಮಾಡುತ್ತೇವೆಂದು ಈ ಸ್ಥಿತಿಯಲ್ಲಿ ಹೇಳುವುದು ಕಷ್ಟವಾಗುತ್ತದೆ ಎನ್ನುವುದನ್ನು ಮಾನ್ಯ ಸದಸ್ಯರು ಅರಿತುಕೊಳ್ಳಬೇಕು. ತುಮಕೂರಿನಲ್ಲಿ ಇತ್ತೀಚೆಗೆ ಈ ಕೆಲವೊಂದು ಸುಧಾರಣೆ ಕಾರ್ಯಕ್ರಮ ಮಾಡಿದ್ದರಿಂದ ಸ್ವಲ್ಪ ಸುಧಾರಣೆಯಾಗಿದೆ ಎಂದು ತಿಳಿದುಕೊಂಡಿದ್ದೇನೆ. ಆದರೂ ಸಹ ತೃಪ್ತಿಕರವಾಗಿದೆ ಎಂದು ನಾನು ಒಪ್ಪುವುದಿಲ್ಲ. ತೃಪ್ತಿಯಾಗುವ ದಿಸೆಯಲ್ಲಿ ಪ್ರಯತ್ನ ಮಾಡುತ್ತೇವೆಂದು ನಾನು ತಿಳಿಸಬಯಸುತ್ತೇನೆ.

ಶ್ರೀ ಟಿ. ಬಿ. ಜಯಚಂದ್ರ. —ಆದಷ್ಟು ಬೇಗ ಮಾಡುವುದರ ಜೊತೆಗೆ, ಅದರ ಬದಲಾಗಿ ಪವರ್ ಕೆಪ್ಯಾಸಿಟರ್ಸ್ ಹಾಕಿ ಪವರ್ ಸಪ್ಲೈಯನ್ನು ಹೆಚ್ಚು ಮಾಡುವುದಕ್ಕೆ ಸಾಧ್ಯವಿದೆ. ಆದನ್ನೇನಾದರೂ ಆದಷ್ಟು ಬೇಗ ಮಾಡಿಸಲು ಪ್ರಯತ್ನಿಸುತ್ತೀರಾ ?

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಅದನ್ನು ಪರಿಶೀಲಿಸುತ್ತೇನೆ.

ಶ್ರೀ ಎಸ್. ಷಫಿ ಅಹಮದ್.—ಮೊನ್ನೆ ತಾನೆ ನಿಮ್ಮ ಸೆಂಟ್ರಲ್ ಸ್ಟೋರ್ಸ್‌ನಿಂದ ವಿದ್ಯುಚ್ಛಕ್ತಿಯ ಎಲ್ಲಾ ಸಲಕರಣೆಗಳನ್ನು ಒದಗಿಸಿದ್ದರೂ ಸಹ ಅಲ್ಲಿನ ಅಧಿಕಾರಿ ವರ್ಗದವರು ವೈರ್ಸ್ ಮತ್ತು ಇತರೆ ಮೆಟೀರಿಯಲ್ಸ್‌ನ್ನು ಡೆಲಿವರಿ ತೆಗೆದುಕೊಳ್ಳುತ್ತಿಲ್ಲ. ಅವರಿಗೆ ಕೆಲಸ ಮಾಡುವುದಕ್ಕೆ ಮತ್ತು ರೈತರ ಬಗ್ಗೆ ಕಾಳಜಿ ಇಲ್ಲ. ಆದ್ದರಿಂದ ತಾವು ಸೂಕ್ತ ಡೈರೆಕ್ಷನ್ಸ್ ಕೊಟ್ಟು ಸೆಂಟ್ರಲ್ ಸ್ಟೋರ್ಸ್‌ನಿಂದ ತಾವು ಏನು ಮೆಟೀರಿಯಲ್ಸ್ ಇಷ್ಟೂ ಮಾಡಿದ್ದೀರ ಅದನ್ನು ತೆಗೆದುಕೊಂಡು ಅತಿ ಶೀಘ್ರದಲ್ಲಿ ಈ ಐ.ಪಿ. ಸೆಟ್‌ನ ಸಮಸ್ಯೆಯನ್ನು ಬಗೆಹರಿಸಿ ಕೊಟ್ಟರೆ ಒಟ್ಟಿಗೆ ನಮ್ಮ ಜಿಲ್ಲೆಯಲ್ಲಿ ಅನುಕೂಲ ಮಾಡುವುದಕ್ಕೆ ಸಾಧ್ಯವಿದೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ. ಆದೇಶ ಕೊಡುತ್ತೇನೆ.